ಉದಯವಾಣಿ

# 2488 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

**ಬೆಂಗಳೂರು:** ಇತ್ತೀಚೆಗೆ ನಡೆದ ಜೈನ್ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವದಲ್ಲಿ 2488 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗಿದ್ದು, 119 ಮಂದಿ ರ‍್ಯಾಂಕ್ ವಿಜೇತರು ಮತ್ತು 58 ಮಂದಿ ಚಿನ್ನದ ಪದಕ ಪುರಸ್ಕೃತರನ್ನು ಸನ್ಮಾನಿಸಲಾಯಿತು. ವಿವಿಯ ಏಳನೇ ಘಟಿಕೋತ್ಸವದಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ವಾಣಿಜ್ಯ, ಮ್ಯಾನೇಜ್‌ಮೆಂಟ್, ಎಕನಾಮಿಕ್ಸ್, ಬಯೋ ಟೆಕ್ನಾಲಜಿ, ಮೈಕ್ರೋ ಬಯಾಲಜಿ, ಬಯೋಕೆಮೆಸ್ಟ್ರಿ, ಭೌತಶಾಸ್ತ್ರ, ಮನಃಶಾಸ್ತ್ರ, ಸಂಗೀತ, ನೃತ್ಯ, ಸಮೂಹ ಸಂವಹನ, ಇಂಗ್ಲಿಷ್, ಕನ್ನಡ ಮತ್ತು ಸಂಸ್ಕೃತ ವಿಭಾಗದಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಸಂಶೋಧನಾ ಪದವಿ ಮಾಡಿದ 2488 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಜೈನ್ ವಿವಿ ಅಧ್ಯಕ್ಷ ಡಾ.ಚೆನ್‌ರಾಜ್ ಜೈನ್, ಸಣ್ಣ ಆಲೋಚನೆಗಳು ದೊಡ್ಡ ಸಂಗತಿಗಳಿಗೆ ಕಾರಣವಾಗುತ್ತವೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಪದವೀಧರರು ಸಮಾಜದ ಒಳಿತಿಗೆ ಕೊಡುಗೆಗಳನ್ನು ನೀಡಬೇಕು ಎಂದರು. ಎಂ.ಫಿಲ್‌ನಲ್ಲಿ ಚಿನ್ನದ ಪದಕ ಪಡೆದ ಅಭಿಷೇಕ್ ವೆಂಕಟೇಶ್ವರ್, ಬಿಎ ಪದವಿಯಲ್ಲಿ ರ‍್ಯಾಂಕ್ ವಿಜೇತೆ ಪಿ.ಬಿ.ಅಕ್ಷತಾ, ವರ್ಷದ ಶ್ರೇಷ್ಠ ಕ್ರೀಡಾಪಟು ರಕ್ಷಿತ್ ಶೆಟ್ಟಿ ತಮ್ಮ ಅನುಭವ ಹಂಚಿಕೊಂಡರು. ಜೈನ್ ವಿವಿ ಕುಲಾಧಿಪತಿ ಡಾ.ಜಿ.ಸಿ.ಕೃಷ್ಣದಾಸ್ ನಾಯರ್, ಕುಲಪತಿ ಕರ್ನಲ್ ಡಾ.ಎನ್.ಸುಂದರರಾಜನ್, ಕುಲಸಚಿವ ಪ್ರೊ.ಎನ್.ವಿ.ಎಚ್.ಕೃಷ್ಣನ್, ಸಮಪುಲಪತಿ ಡಾ.ಸಂದೀಪ್ ಶಾಸ್ತ್ರಿ, ಆಡಳಿತ ಮಂಡಳಿ ಸದಸ್ಯರು, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಇದ್ದರು.